# ಏಕತಾನತೆ ಮುರಿಯುವತ್ತ ರಚಿತಾ



**ಗ್ಲಾಮರಸ್**, ಪಕ್ಕದ ಮನೆ ಹುಡುಗಿಯಂಥ ಪಾತ್ರಗಳಲ್ಲಿ ನಟಿಸಿ ಜನರಿಂದ 'ಡಿಂಪಲ್ ಕ್ವೀನ್' ಎಂದು ಕರೆಸಿಕೊಂಡಿರುವ ನಟಿ ರಚಿತಾ ರಾಮ್, ಡಿ–ಗ್ಲಾಮ್, ರಗಡ್ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಜಡೇಶ್ ಕೆ. ಹಂಪಿ ನಿರ್ದೇಶನದ 'ಲ್ಯಾಂಡ್ ಲಾರ್ಡ್' ಸಿನಿಮಾದಲ್ಲಿ 'ಚಿನ್ನಮ್ಮ' ಪಾತ್ರದಲ್ಲಿ ರಚಿತಾ ತೆರೆ ಮೇಲೆ ಮಿಂಚಲಿದ್ದಾರೆ. ಒಂದು ಕೈಯಲ್ಲಿ ಮಚ್ಚು ಹಾಗೂ ಮತ್ತೊಂದು ಕೈಯಲ್ಲಿ ಲಾಟೀನು ಹಿಡಿದಿರುವ ರಚಿತಾ ಪಾತ್ರದ ಲುಕ್ ಈಚೆಗೆ ಬಿಡುಗಡೆಯಾಗಿದೆ. 18 ವರ್ಷದ ಮಗಳಿರುವ ತಾಯಿಯಾಗಿ ಅವರು ಬಣ್ಣಹಚ್ಚಿದ್ದು, ಎಲೆ ಅಡಿಕೆ ಜಗಿಯುತ್ತಾ, ಕೈಯಲ್ಲೊಂದು ಕತ್ತಿ ಹಿಡಿದು ರಚಿತಾ ಪ್ರವೇಶಿಸುವ ಟೀಸರ್, ಅವರು ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿರುವುದರ ಸೂಚನೆ ನೀಡಿದೆ.

ಈಚೆಗೆ ತಮಿಳಿನ 'ಕೂಲಿ' ಸಿನಿಮಾದಲ್ಲಿ ನಟಿಸಿದ್ದ ರಚಿತಾ ರಾಮ್, ತಮ್ಮ ಅಭಿನಯಕ್ಕೆ ಶಹಭಾಸ್‌ಗಿರಿ ಪಡೆದುಕೊಂಡಿದ್ದರು. ಬಹುಮುಖ ಪಾತ್ರಗಳನ್ನು ಅನ್ವೇಷಿಸಲು ತಮಗೆ ಇದು ಉತ್ತಮ ಸಮಯ ಎಂದಿರುವ ಅವರು, 'ಸಿನಿಮಾರಂಗಕ್ಕೆ ಬಂದು 12 ವರ್ಷಗಳಾಗಿವೆ. ಹೀರೊಗಳು ಪಾತ್ರಗಳಲ್ಲಿ ಪ್ರಯೋಗಗಳನ್ನು ಮಾಡುತ್ತಾರೆ. ನಟಿಯರು ಯಾಕೆ ಮಾಡಬಾರದು? ನಾನು ನಟಿಯರಾದ ಮಾಲಾಶ್ರೀ, ಶ್ರುತಿ ಅವರನ್ನು ಅನುಸರಿಸುತ್ತೇನೆ. ನಟಿಯೆಂದರೆ ಗ್ಲಾಮರ್ ಅಷ್ಟೇ ಎಂಬ ಕಲ್ಪನೆಯನ್ನು, ಪಾತ್ರಗಳ ಏಕತಾನತೆಯನ್ನು ಮುರಿಯಬೇಕು' ಎಂದು ಹೇಳಿದ್ದಾರೆ.

'ಅಯೋಗ್ಯ 2', 'ಕಲ್ಟ್' ಹಾಗೂ 'ಲ್ಯಾಂಡ್ ಲಾರ್ಡ್' ಸಿನಿಮಾಗಳು ಅವರ ಲೈನ್‌ಅಪ್‌ನಲ್ಲಿದ್ದು, ಒಂದೊಂದು ಸಿನಿಮಾದಲ್ಲಿಯೂ ಒಂದೊಂದು ರೀತಿಯ ಪಾತ್ರಗಳು ತಮಗೆ ದೊರೆತಿರುವುದರ ಕುರಿತು ಸಂತಸ ವ್ಯಕ್ತಪಡಿಸಿದ್ದಾರೆ.

'ಲಾಂಡ್ ಲಾರ್ಡ್' ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಅವರು, ''ಇಂಥ ಪಾತ್ರ ಸಿಕ್ಕಿದ್ದು ಬಹಳ ಖುಷಿಯಿದೆ. ಈ ರೀತಿಯ ಪಾತ್ರಗಳು ಸವಾಲು ಹಾಗೂ ಥ್ರಿಲ್ಲಿಂಗ್ ಆಗಿರುತ್ತವೆ. ವೃತ್ತಿಜೀವನದಲ್ಲಿ, ಹಾಗೇ ಜನರ ನೆನಪಿನಲ್ಲಿ ಉಳಿಯುವಂಥ ಪಾತ್ರಗಳನ್ನು ಮಾಡಬೇಕು. ಈ ಸಿನಿಮಾದಲ್ಲಿ ಮೊದಮೊದಲು ಕೋಲಾರದ ಸ್ಲ್ಯಾಂಗ್ ಕಷ್ಟವಾಗುತ್ತಿತ್ತು. ದುನಿಯಾ ವಿಜಿ ಕಂಫರ್ಟೆಬಲ್ ಆಗಿದ್ದರು. ಎರಡನೇ ದಿನ ಒಂದು ಹಿಡಿತ ಸಿಕ್ಕಿತು. ನನ್ನ ಪರ್ಫಾರ್ಮೆನ್ಸ್ ನೋಡಿ ಜಡೇಶ್ ಬಹಳ ಖುಷಿಯಾದರು. ನಾನು ಅಂದುಕೊಂಡಿರದಿದ್ದ ಪಾತ್ರವನ್ನು ಅವರು ನನ್ನಿಂದ ಮಾಡಿಸಿದರು'' ಎಂದು ವಿವರಿಸಿದ್ದಾರೆ.

ಶೀಘ್ರವೇ ಮಹಿಳಾ ಪ್ರಧಾನ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿರುವುದಾಗಿಯೂ ಸುಳಿವು ನೀಡಿದ್ದಾರೆ. ಈ ವರ್ಷಾಂತ್ಯಕ್ಕೆ 'ಲ್ಯಾಂಡ್ ಲಾರ್ಡ್' ಸಿನಿಮಾ ತೆರೆಕಾಣುವ ಸಾಧ್ಯತೆ ಇದೆ. ಚಿತ್ರದಲ್ಲಿ ವಿಜಯ್ ಅವರ ಮಗಳಾದ ರಿತನ್ಯ ನಟಿಸಿದ್ದು, ಸ್ವತಂತ್ರ ಭೂಮಿಯ ಕಲ್ಪನೆ, ಶಿಕ್ಷಣ, ಕೂಲಿಗೆ ತಕ್ಕ ಕಾಸು ಎಂಬ ವಿಷಯಗಳ ಕುರಿತು ಚಿತ್ರ ಕಥಾಹಂದರವಿದೆ. ■

# 'ಲವ್ ಒಟಿಪಿ' ಎಂದ ಅನೀಶ್



ನಟ ಅನೀಶ್ ತೇಜೇಶ್ವರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಲವ್ ಒಟಿಪಿ' ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಪ್ರೇಮಕಥಾ ಹಂದರದ ಈ ಸಿನಿಮಾ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಸಿದ್ಧಗೊಂಡಿದ್ದು, ಶೀಘ್ರದಲ್ಲಿ ಬಿಡುಗಡೆಯಾಗುವ ಸೂಚನೆ ಸಿಕ್ಕಿದೆ.

ಅನೀಶ್ ಈ ಹಿಂದೆ 'ರಾಮಾರ್ಜುನ' ಚಿತ್ರವನ್ನು ನಿರ್ದೇಶನ ಮಾಡಿದ್ದರು. ನಟನಾಗಿ ಕಾಣಿಸಿಕೊಂಡಿದ್ದ ಅವರ ಹಿಂದಿನ ಚಿತ್ರ 'ಆರಾಮ್ ಅರವಿಂದ ಸ್ವಾಮಿ' ಯಶಸ್ಸಿನ ಬೆನ್ನಲ್ಲೇ ಮತ್ತೆ ನಿರ್ದೇಶನದತ್ತ ಹೊರಳಿದ್ದರು.

ತಮ್ಮ ನಿರ್ದೇಶನದ ಈ ಎರಡನೇ ಸಿನಿಮಾದಲ್ಲಿ ಅತ್ಯುತ್ತಮ ಕಂಟೆಂಟ್ ಹಾಗೂ ಕಮರ್ಷಿಯಲ್ ಅಂಶಗಳನ್ನು ನೀಡುವುದಾಗಿ ಹೇಳಿದ್ದರು. ದೊಡ್ಡ ಮಟ್ಟದಲ್ಲಿ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದು, ಹೆಚ್ಚು ಪ್ರೇಕ್ಷಕರನ್ನು ತಲುಪುವ ಉದ್ದೇಶದೊಂದಿಗೆ ಎರಡು ಭಾಷೆಗಳಲ್ಲಿ ಸಿನಿಮಾ ಬಿಡುಗಡೆ ಮಾಡುವುದಾಗಿಯೂ ತಿಳಿಸಿದ್ದರು.

ಸಿನಿಮಾ ಚಿತ್ರೀಕರಣ ಮುಗಿದು ಬಿಡುಗಡೆ ಹಂತಕ್ಕೆ ಬಂದಿದ್ದು, ಶೀಘ್ರದಲ್ಲಿಯೇ ಚಿತ್ರದ ಟ್ರೇಲರ್ ಬಿಡುಗಡೆ ಮಾಡುವ ನಿರೀಕ್ಷೆಯಿದೆ. ತೆಲುಗಿನ ಹೆಸರಾಂತ ನಟ ರಾಜೀವ್ ಕನಕಾಲ ಈ ಚಿತ್ರದ ಮೂಲಕ ಕನ್ನಡಕ್ಕೆ ಬರುತ್ತಿದ್ದಾರೆ. ಅನೀಶ್ ಜೊತೆಗೆ ಜಾಹ್ನವಿ ಕಲಕೇರಿ, ಆರೋಹಿ ನಾರಾಯಣ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಭಾವಪ್ರೀತ ಪ್ರೊಡಕ್ಷನ್ಸ್ ಮೂಲಕ ವಿಜಯ್ ಎಂ. ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ■